ಹಚ್ಚಿ ಪಂಚ ಪ್ರವೀಣಕುಮಾರ ಅವರ ಕೈಯಲ್ಲಿ ಕೊಟ್ಟರು. ಸದರಿ ಪ್ರಮೀಣ ಕುಮಾರ ಆ ನೋಟುಗಳನ್ನು ಎರಡೂ ಕೈಗಳಿಂದ ಎಣಿಸಿ ಫಿರ್ಯಾದಿ ಶರ್ಟನ ಎಡಜೇಬಿನಲ್ಲಿ ಏನೂ ಇಲ್ಲ ಎಂದು ಖಾತರಿಪಡಿಸಿಕೊಂಡು ಸದರಿ ಹಣವನ್ನು ಜೇಬಿನಲ್ಲಿ ಇಟ್ಟಿರುತ್ತಾರೆ. ನಂತರ ಎರಡು ಗಾಜಿನ ಬಟ್ಟಲುಗಳನ್ನು ತರಿಸಿ ಸೋಡಿಯಂ ಕಾರ್ಬೋನೇಟ ಧ್ರಾವಣ ತಯಾರಿಸಿದ್ದು ಅದು ಬಣ್ಣ ರಹಿತವಾಗಿತ್ತು ನಂತರ ಪಂಚ ಪ್ರವಿಣಕುಮಾರನ ಕೈ ಬೆರಳುಗಳನ್ನು ಆಧ್ರಾವಣದಲ್ಲಿ ಅದ್ದಿಸಿದರು ಸದರಿ ಕೈ ಬೆರಳುಗಳು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿತು. ಸದರಿ ಬಣ್ಣ ಬಂದಿದ್ದ ಧ್ರಾವಣವನ್ನು ಬಾಟಲಿಯಲ್ಲಿ ಹಾಕಿ ಜೆ.ಬಿ. ಎಂಬ ಅಕ್ಷರದಿಂದ ಸೀಲ್ ಮಾಡಿದರು ನಂತರ ಪಂಚರು ಮತ್ತು ಪಿ.ಐ. ಸಹಿ ಮಾಡಿದ ಚೀಟಿ ಅಂಟಿಸಿರುತ್ತಾರೆ ಅದನ್ನು ಆರ್ಟಿಕಲ್-2 ಎಂದು ಗುರುತಿಸಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ಆರ್ಟಿಕಲ್-2 ನ್ನು ಈಗಾಗಲೇ ಮು.ಮಾ.2 ಎಂದು ಗುರುತಿಸಲಾಗಿದೆ. ನಂತರ ರಾಸಾಯನಿಕ ಪ್ರಕ್ರಿಯೇ ಬಗ್ಗೆ ನಮಗೆ ತಿಳಿಸಿದರು. ನಂತರ ಆರ್ಟಿಕಲ್-1, 2 ಮತ್ತು ಪಿನಾಪ್ತಲಿನ ಪುಡಿ ಇರುವ ಡಬ್ಬಿಯನ್ನು ಲೋಕಾಯುಕ್ತ ಕಛೇರಿಯ ಅಲಮಾರದಲ್ಲಿ ಇಟ್ಟು ಬೀಗ ಹಾಕಿದರು. ಪಿಐ ಅವರು ಆರೋಪಿ ಲಂಚದ ಹಣ ಕೇಳಿದಾಗ ಅದನ್ನು ಕೊಡುವಂತೆ ಫಿರ್ಯಾದಿಗೆ ಹೇಳಿದರು. ಆರೋಪಿ ಸದರಿ ಲಂಚದ ಹಣ ಇಂತಹ ಜಾಗದಲ್ಲಿ ಇಡು ಅಥವಾ ಇಂತಹವರಿಗೆ ಕೊಡು ಎಂದು ಹೇಳಿದರೆ ಆ ರೀತಿ ಮಾಡುವಂತೆ ಹೇಳಿದರು. ನಂತರ ಫಿರ್ಯಾದಿಗೆ ಟ್ರ್ಯಾಪ ಆದ ನಂತರ ಕೈಯಿಂದ ಮುಖವನ್ನು ವರಸಿಕೊಳ್ಳುವಂತೆ ಸನ್ನೆ ಮಾಡುವಂತೆ ತಿಳಿಸಿದರು. ನಂತರ ಆರೋಪಿ ಮತ್ತು ಫಿರ್ಯಾದಿಯ ನಡುವೆ ನಡೆದ ಸಂಭಾಷಣೆಯನ್ನು ಧ್ವನಿ ಮುದ್ರಣಮಾಡಿಕೊಂಡು ಬರುವಂತೆ ಪಿಐ ರವರು ಹೇಳಿದರು. ನಂತರ ನನಗೆ ಫಿರ್ಯಾದಿ ಮತ್ತು ಆರೋಪಿಯ ನಡುವೆ ನಡೆಯುವ ಸಂಭಾಷಣೆಯನ್ನು ತಿಳಿದುಕೊಳ್ಳುವಂತೆ ಹೇಳಿದರು. ಅಲ್ಲಿ ವಿಡಿಯೋ ಮಾಡಿ ಫೋಟೊಗಳನ್ನು ಸೈಯದ ಸಫಿಯೋದ್ದಿನ ಪೇದೆಯಿಂದ ತೆಗೆಯಿಸಿದರು. ಸದರಿ ಪಂಚನಾಮೆ ದಿಃ 28.02.2015 ರಂದು ಬೆಳಿಗ್ಗೆ 11-45 ರಿಂದ 12-45 ಗಂಟೆಯವರೆಗೆ ಮಾಡಿದರು. ಸದರಿ ಪಂಚನಾಮೆಗೆ ನಾನು ಸಹಿ ಮಾಡಿರುತ್ತೇನೆ ಅದನ್ನು ನಿ.ಪಿ.18(ಬಿ) ಎಂದು ಗುರುಸಲಾಯಿತು. ಮು.ಮಾ.4 ಮತ್ತು 5 ಸಿ.ಡಿ.ಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ನಿ.ಪಿ.3 ರಿಂದ 17 ಫೋಟೊಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

4. ದಿಃ 28.02.2015 ರಂದು ಮಧ್ಯಾಹ್ನ 1-00 ಗಂಟೆಗೆ ಲೋಕಾಯುಕ್ತ ಕಛೇರಿಯಿಂದ ಒಂದು ಟವೇರಾ ಖಾಸಗಿ ವಾಹನ ಮತ್ತೊಂದು ಇಲಾಖಾ ವಾಹನದಲ್ಲಿ ಹೊರಟೇವು ನಾನು, ಫಿರ್ಯಾದಿ, ತನಿಖಾಧಿಕಾರಿ, ವಿಜಯಕುಮಾರ, ಶ್ರೀನಿವಾಸ, ಖಾಸಗಿ ವಾಹನದಲ್ಲಿ ಇದ್ದೆವು. ಇಲಾಖಾ ವಾಹನದಲ್ಲಿ ಪಂಚ ಸಾಕ್ಷಿ ಪ್ರವಿಣಕುಮಾರ, ಸಫಿಯುದ್ದಿನ ಪೇದೆ, ಮುತ್ತಣ್ಣ ಪೇದೆ ಇದ್ದರು. ಮಧ್ಯಾಹ್ನ 2-00 ಹಸನಾಪೂರ ಗ್ರಾಮಕ್ಕೆ ಹೋದೆವು. ಅಲ್ಲಿ ವಾಹನ ನಿಲ್ಲಿಸಿ ಪಿಐ ರವರು ಫಿರ್ಯದಿಗೆ ಆರೋಪಿಗೆ ಫೋನ್ ಮಾಡುವಂತೆ ಸೂಚಿಸಿದರು. ಪಿಐ ರವರ ಸೂಚನೆಯ

ಮೇರೆಗೆ ಫಿರ್ಯಾದಿ ಆರೋಪಿಗೆ ಫೋನ್ ಮಾಡಲಾಗಿ ಆರೋಪಿ ಸಿದ್ದಾಪೂರನಲ್ಲಿ ಇದ್ದು ಅರ್ಧ ಗಂಟೆಯಲ್ಲಿ ಸುರಪೂರಕ್ಕೆ ಬರುತ್ತೇನೆ ಎಂದು ತಿಳಿಸಿದರು. ನಂತರ ಪಿಐ ರವರು ಸೂಚನೆಯಂತೆ ಸುರಪೂರಕ್ಕೆ ಹೊರಟೇವು. ಸುರಪೂರದ ವೆಂಕಟಸ್ವಾಮಿ ಗುಡಿಯ ಹತ್ತಿರ ಹೋಗಿ ಕಾಯ್ದೆ ವು. ಮಧ್ಯಾಹ್ನ 3-30 ಗಂಟೆಗೆ ಆರೋಪಿಯಿಂದ ಫಿರ್ಯಾಧಿಗೆ ಫೋನ್ ಬಂತು. ಆರೋಪಿ ಫೋನ್ ನಲ್ಲಿ ಸಂಜು ಜೂಸ್ ಸೆಂಟರನಲ್ಲಿ ಇದ್ದೇನೆ ಅಲ್ಲಿಗೆ ಬಾ ಎಂದು ಹೇಳಿದರು. ನಾನು ಮತ್ತು ಫಿರ್ಯಾದಿ ಸಂಜು ಜೂಸ್ ಸೆಂಟರನಲ್ಲಿ ಹೋದೆವು. ಆರೋಪಿ ಮತ್ತು ಫಿರ್ಯಾದಿ ಒಂದು ಟೇಬಲನಲ್ಲಿ ಕುಳಿತರು ಮತ್ತೊಂದು ಟೇಬಲನಲ್ಲಿ ನಾನು ಕುಳಿತುಕೊಂಡೆ. ಫಿರ್ಯಾದಿ ಆರೋಪಿ ನೌಕರನಿಗೆ ತನ್ನ ಕೆಲಸದ ಬಗ್ಗೆ ವಿಚಾರಿಸಿದಾಗ ಆರೋಪಿ ಲಂಚದ ಹಣ ಕೇಳಿದ. ಫಿರ್ಯಾದಿ 3,000/- ರೂಪಾಯಿಗಳನ್ನು ಸರ್ವೆಯರ್ ಮಾಳಪ್ಪ ಅವರ ಕೈಯಲ್ಲಿ ಕೊಟ್ಟುರು ಅವರು ಎರಡೂ ಕೈಗಳಿಂದ ಆ ನೊಟುಗಳನ್ನು ಎಣಿಸಿಕೊಂಡು ತನ್ನ ಶರ್ಟನ ಎಡ ಜೇಬಿನಲ್ಲಿ ಇಟ್ಟುಕೊಂಡರು. ಫಿರ್ಯಾದಿ ಎದುಬಂದು ಹೊರಗಡೆ ಇದ್ದ ಲೋಕಾಯುಕ್ತ ಸಿಬ್ಬಂದಿಗೆ ತನ್ನ ಕರವಸ್ತ್ರದಿಂದ ಮುಖ ವರಸಿಕೊಳ್ಳುವಂತೆ ಸನ್ನೆ ಮಾಡಿದನು. ಆಗ ಪಿಐ ಮತ್ತು ಇತರೆ ಸಿಬ್ಬಂದಿಗಳು ಮತ್ತು ಪಂಚ ಪ್ರವಿಣಕುಮಾರ ಎಲ್ಲರು ಬಂದರು. ಪೇದೆ ವಿಜಯಕುಮಾರ ಮತ್ತು ಶ್ರೀನೀವಾಸ ಇವರು ಆರೋಪಿಯ ಎರಡು ಕೈಗಳನ್ನು ಹಿಡಿದರು. ಫಿರ್ಯಾದಿ ಆರೋಪಿ ಮಾಳಪ್ಪನನ್ನು ತೋರಿಸಿ ಲಂಚದ ಹಣ 3,000/- ರೂಪಾಯಿ ಕೊಟ್ಟಿದ್ದೇನೆ ಎಂದು ಹೇಳಿದರು. ಪಿಐ ರವರು ಆರೋಪಿಗೆ ಪರಿಚಯ ಮಾಡಿಕೊಂಡರು. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಆರೋಪಿಗೆ ಲಂಚದ ಹಣದ ವಿಷಯದಲ್ಲಿ ಟ್ರ್ಯಾಪ ಮಾಡಿರುತ್ತೇವೆ ಎಂದು ತಿಳಿಸಿದರು. ಫಿರ್ಯಾದಿ ಮತ್ತು ನನಗೆ ಘಟನೆಯ ಬಗ್ಗೆ ಕೇಳಿದಾಗ ಸಂಜು ಜೂಸ್ ಸೆಂಟರಗೆ ಬಂದು ಕೆಲಸದ ಬಗ್ಗೆ ವಿಚಾರಿಸಿದಾಗ ಹಣವನ್ನು ಕೇಳಿದ್ದು ಎಲ್ಲಾದರೂ ಅಷ್ಟೆ ಕೊಡುವದು ಇಲೇ ಕೊಡು ಎಂದಾಗ 3,000/- ರೂಪಾಯಿ ಹಣವನ್ನು ಆರೋಪಿಗೆ ಫಿರ್ಯಾದಿಗೆ ಕೊಟ್ಟರು. ನಂತರ ಪೊಲೀಸರಿಗೆ ಸನ್ನೆ ಮಾಡಿದರು ಎಂದು ತಿಳಿಸಿದರು. ನಂತರ ಪಿಐ ರವರು ಸಿಬ್ಬಂದಿಗೆ ಸೋಡಿಯಂ ಕಾರ್ಬೋನೇಟ ಬಣ್ಣ ರಹಿತವಾದ ದ್ರಾವಣ ತಯಾರಿಸಲು ತಿಳಿಸಿದರು. ಸಿಬ್ಬಂದಿ ದ್ರಾವಣ ತಯಾರಿಸಿದರು. ಅದು ಆರ್ಟಿಕಲ್-3 ಮತ್ತು 3(ಎ) ಆಗಿದ್ದು ಅದನ್ನು ಈಗಾಗಲೇ ಮು.ಮಾ.6 ಮತ್ತು 7 ಎಂದು ಗುರುತಿಸಲಾಗಿದೆ. ಸದರಿ ದ್ರಾವಣದಲ್ಲಿ ಮಾಳಪ್ಪ ಅವರ ಬಲಗೈ ಬೆರಳುಗಳನ್ನು ತೊಳೆದಾಗ ಸದರಿ ದ್ರಾವಣ ಗುಲಾಬಿ ಬಣ್ಣಕ್ಕೆ ತಿರುಗಿತು. ಅದು ಆರ್ಟಿಕಲ್-4, 4(ಎ) ಆಗಿದ್ದು ಅದನ್ನು ಈಗಾಗಲೇ ಮು.ಮಾ.8 ಮತ್ತು 9 ಎಂದು ಗುರುತಿಸಲಾಗಿದೆ. ಮಾಳಪ್ಪ ಅವರ ಎಡಗೈ ಬೆರಳುಗಳನ್ನು ತೊಳೆದಾಗ ಸದರಿ ದ್ರಾವಣ ಗುಲಾಬಿ ಬಣ್ಣಕ್ಕೆ ತಿರುಗಿತು. ಅದು ಆರ್ಟಿಕಲ್-5, 5(ಎ) ಆಗಿದ್ದು ಅದನ್ನು ಈಗಾಗಲೇ ಮು.ಮಾ.10 ಮತ್ತು 11 ಎಂದು ಗುರುತಿಸಲಾಗಿದೆ. ಆರೋಪಿಯ ಜೇಬಿನಲ್ಲಿ ಇದ್ದ ನೋಟುಗಳನ್ನು ನನಗೆ ತೆಗೆಯುವಂತೆ ಸೂಚಿಸಿದರು. ನಾನು ಆ ನೋಟುಗಳನ್ನು ತೆಗೆದು ಪಂಚ ಸಾಕ್ಷಿ ಪ್ರವಿಣಕುಮಾರ ಅವರ ಕೈಯಲ್ಲಿ ಕೊಟ್ಟಿದ್ದು ಅವರು ಸದರಿ

ನೋಟುಗಳು ಲೋಕಾಯುಕ್ತ ಕಛೇರಿಯಲ್ಲಿ ಪ್ರಾಯೋಗಿಕ ಪಂಚನಾಮೆ ಕಾಲದಲ್ಲಿ ಬರೆದುಕೊಂಡ ನೋಟುಗಳು ಅವೆ ಇರುತ್ತವೆ ಎಂದು ತಿಳಿಸಿದರು. ಆ ಹಣವನ್ನು ಹೊಂದಾಣಿಕೆ ಮಾಡಿ ನೋಡಿದಾಗ ಆ ನಂಬರಗಳು ಅವೇ ಇದ್ದು ಆ ಬಗ್ಗೆ ನಿ.ಪಿ.29 ರಲ್ಲಿ ನಮೂದು ಮಾಡಿದ್ದು ಸಾಕ್ಷಿಯ ಸಹಿಗಳನ್ನು ನಿ.ಪಿ.29(ಬಿ) ಮತ್ತು ನಿ.ಪಿ.29(ಸಿ) ಎಂದು ಗುರುತಿಸಲಾಯಿತು. ಮು.ಮಾ.1ನ್ನು ನೋಡಿದರೆ ಗುರುತಿಸುತ್ತೇನೆ. ಮು.ಮಾ.1ನ್ನು ಈಗಾಗಲೇ ಗುರುಸಲಾಗಿದೆ. ಕವರನ್ನು ನೋಡಿದರೆ ಗುರುತಿಸುತ್ತೇನೆ. ಸಂಜು ಜೂಸ್ ಸೆಂಟರನಲ್ಲಿ ಬಹಳ ಗದ್ದಲ ಇದುದ್ದರಿಂದ ಅಲ್ಲಿಂದ ಸರ್ವೆ ಕಛೇರಿಗೆ ಹೋದೆವು. ಅಲ್ಲಿ ಮಾಳಪ್ಪ ಎಂಬುವವರನ್ನು ವಿಚಾರಿಸಿದಾಗ ಸಿದ್ದರಾಜು ಅವರು ಸಾಹೇಬರು ಯಾದಗಿರಿಯ ಕಛೇರಿಗೆ ಹೋಗಿದ್ದಾರೆ ಎಂದು ಹೇಳಿದರು. ನರೇಶಕುಮಾರ ಅವರಿಗೆ ಆರೋಪಿಯ ದಸ್ತಗಿರಿ ನೊಟೀಸನ್ನು ಪಿಐ ರವರು ಜಾರಿ ಮಾಡಿದರು. ಅಲ್ಲಿಂದ ಲೋಕಾಯುಕ್ತ ಕಛೇರಿಗೆ ವಾಪಾಸ ಬಂದೆವು.

ಸರಕಾರಿ ಅಭಿಯೋಜಕರ ಕೋರಿಕೆಯ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆಗಾಗಿ ಮುಂದೂಡಲಾಯಿತು.

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.

ಫ್ರಾಸಾ-2 ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಿದ
ದಿನಾಂಕಃ **20-09-2024**
ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ

**5.** ನಂತರ ಪಿಐ ರವರು ಆರೋಪಿತನು ಧರಿಸಿದ ಶರ್ಟನ ಬದಲಿ ವ್ಯವಸ್ಥೆ ಮಾಡಿ ಆರೋಪಿ ಧರಿಸಿದ ಶರ್ಟನ ಎಡ ಜೇಬಿನ ಒಳಪದರನ್ನು ಶ್ರೀನಿವಾಸ ಹೆಚ್.ಸಿ. ಅವರಿಂದ ಸೋಡಿಯಂ ಕಾರ್ಬೋನೇಟ ಧ್ರಾವಣದಲ್ಲಿ ತೋಳೆದಾಗ ಸದರಿ ಭಾಗ ತಿಳಿ ಗುಲಾಬಿ ಬಣಕ್ಕೆ ತಿರುಗಿತು ಸದರಿ ಧ್ರಾವಣವನ್ನು ಎರಡು ಸಮಬಾಗ ಮಾಡಿ ಗಾಜಿನ ಬಾಟಲಿಯಲ್ಲಿ ಪ್ರತ್ಯೇಕವಾಗಿ ಸಂಗ್ರಹಿಸಿ ಬಾಟಲಿ ಬಾಯಿ ಮುಚ್ಚಿ ಬಟ್ಟೆಯಿಂದ ಸುತ್ತಿ ದಾರದಿಂದ ಕಟ್ಟಿ ಜೆ.ಬಿ. ಎಂಬ ಮೋಹರನ್ನು ಹಾಕಿ ಅದಕ್ಕೆ ಆರ್ಟಿಕಲ್-7, 7(ಎ) ಎಂದು ಗುರುತಿಸಲಾಯಿತು ಸದರಿ ಆರ್ಟಿಕಲ್‌ಗಳನ್ನು ಈಗಾಗಲೇ ಮು.ಮಾ.12 ಮತ್ತು 13 ಎಂದು ಗುರುತಿಸಲಾಗಿದೆ. ಆರೋಪಿ ಧರಿಸಿದ ಶರ್ಟನ್ನು

ಪಡೆದು ಅದನ್ನು ಸೀಲ್ ಮಾಡಿ ಅದನ್ನು ಆರ್ಟಿಕಲ್-8 ಎಂದು ಗುರುತಿಸಲಾಯಿತು. ಸದರಿ ಶರ್ಟನ್ನು ನೋಡುತ್ತಿದ್ದು ಅದನ್ನು ಈಗಾಗಲೇ ಮು.ಮಾ.14 ಎಂದು ಗುರುತಿಸಲಾಗಿದೆ. ಫಿರ್ಯಾದಿಯ ಬಳಿ ಇದ್ದ ಧ್ವನಿ ಸುರುಳಿಯನ್ನು ಲ್ಯಾಪಟಾಪಗೆ ಹಾಕಿಸಿ ಪಂಚರ ಸಮಕ್ಷಮ ಕೇಳಿಸಲಾಯಿತು. ಸದರಿ ಸಂಭಾಷಣೆಯನ್ನು ಸಿ.ಡಿ.ಗೆ ವರ್ಗಾಯಿಸಿ ಆ ಸಿ.ಡಿ.ಯನ್ನು ಸೀಲ್ ಮಾಡಿದರು ಸದರಿ ಸಿ.ಡಿ. ಆರ್ಟಿಕಲ್-9 ಎಂದು ಗುರುತಿಸಲಾಯಿತು. ಅದನ್ನು ಈಗಾಗಲೇ ಮು.ಮಾ.4 ಎಂದು ಗುರುತಿಸಲಾಗಿದೆ. ನಂತರ ಫಿರ್ಯಾದಿದಾರನ್ನು ಟ್ರ್ಯಾಪ ಕಾಲಕ್ಕೆ ಮುಂಚೆ ಮತ್ತು ಟ್ರ್ಯಾಪ ಕಾಲಕ್ಕೆ ಸಂಗ್ರಹಿಸಿದ ಆರೋಪಿಯ ಧ್ವನಿ ಯನ್ನು ಕೇಳಿಸಿ ಆತನ ಮೇಲಾಧಿಕಾರಿಯಾದ ನರೇಶ ಕುಮಾರ ಶಿರೇಸ್ತೆದಾರ ತಹಶೀಲ್ದಾರ ಕಛೇರಿ ಸುರಪೂರ ಅವರಿಂದ ಆರೋಪಿಯ ಧ್ವನಿಯನ್ನು ಗುರುತಿಸಲಾಯಿತು. ಆರೋಪಿಯ ದಸ್ತಗಿರಿ ಬಗ್ಗೆ ನರೇಶ ಕುಮಾರ ಅವರಿಗೆ ನೋಟಸನ್ನು ಕೊಟ್ಟರು.

6. ನಂತರ ಆರೋಪಿ ಸ್ವರಕ್ಷಣ ಹೇಳಿಕೆಯನ್ನು ಕೈಯಲ್ಲಿ ಬರೆದುಕೊಟ್ಟ ಅದನ್ನು ಈಗಾಗಲೇ ನಿ.ಪಿ.20 ಎಂದು ಗುರುತಿಸಲಾಗಿದೆ. ಯಾರೋ ನನ್ನ ವಿರುದ್ಧ ದ್ವೇಶದಿಂದ ದಿಃ 24.02.2014 ರಂದು 2000/- ರೂಪಾಯಿ ತೆಗೆದುಕೊಂಡಿದ್ದು ನಿಜವಿರುತ್ತದೆ ಎಂದು ಬರೆದಿರುತ್ತಾನೆ. ದಿಃ 28.02.2015 ರಂದು ಹಣ ಕೊಡಲಾಯಿತು. ಫಿರ್ಯಾದಿ ಮತ್ತು ನನ್ನನ್ನು ಪಿಐ ವಿಚಾರ ಮಾಡಿದಾಗ ಸದರಿ ಹಣ ಲಂಚದ ಹಣ ಆಗಿತ್ತು ಎಂದು ಫಿರ್ಯಾದಿ ಮತ್ತು ನಾನು ಹೇಳಿರುತ್ತೇವೆ. ಜೆ.ಬಿ. ಸೀಲನ್ನು ಪಂಚ ಸಾಕ್ಷಿ ಪ್ರವಿಣಕುಮಾರ ಅವರ ತಾಬಾಕ್ಕೆ ಕೊಟ್ಟು ಸದರಿ ಸೀಲು ನ್ಯಾಯಾಧೀಶರು ಅಥವಾ ವಿಚಾರಣ ಅಧಿಕಾರಿ ಕೇಳಿದಾಗ ಮಾತ್ರ ಹಾಜರಪಡಿಸುವಂತೆ ಹೇಳಿ ಆ ಬಗ್ಗೆ ರಸೀದಿ ಪಡೆದುಕೊಂಡರು. ಈ ಎಲ್ಲ ಪ್ರಕ್ರಿಯೇಯನ್ನು ಸೈಯದ ಸಫಿಯುದ್ದಿನ ಅವರಿಂದ ಫೋಟೊ ತೆಗೆಸಿ ವೀಡಿಯೋ ಮಾಡಿಸಿದರು ಸದರಿ ಫೋಟೊಗಳು ಈಗಾಗಲೇ ನಿ.ಪಿ.22 ರಿಂದ 27 ಎಂದು ಗುರುತಿಸಲಾಗಿದೆ. ಸದರಿ ಪಂಚನಾಮೆಯನ್ನು ಮಧ್ಯಾಹ್ನ 3-30 ರಿಂದ ಸಂಜೆ 7-30 ರ ವರೆಗೆ ಪಂಚರ ಸಮಕ್ಷಮ ಫಿರ್ಯಾದಿ ಹೇಳಿದಂತೆ ತಯಾರಿಸಲಾಯಿತು. ಸದರಿ ಪಂಚನಾಮೆಯನ್ನು ಈಗಾಗಲೇ ನಿ.ಪಿ.21 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿ.ಪಿ.21(ಬಿ) ಎಂದು ಗುರುತಿಸಲಾಯಿತು.

7. ದಿಃ 01.03.2015 ರಂದು ಮರು ಹೇಳಿಕೆಯನ್ನು ಪಡೆದುಕೊಂಡರು. ದಿಃ 03.03.2015 ರಂದು ನಾನು, ಫಿರ್ಯಾದಿ ಮತ್ತು ಇನ್ನೊಬ್ಬ ಪಂಚರ ಲೋಕಾಯುಕ್ತ ಠಾಣೆಗೆ ಹಾಜರಾದೆವು. ಅಲ್ಲಿ ಇದ್ದ ಲೋಕೋಪಯೋಗಿ ಇಲಾಖೆಯ ಎ.ಇ. ಮೋಹನ ದೇಶಮುಖ ಇವರನ್ನು ಪರಿಚಯ ಮಾಡಿಸಿದರು. ನಂತರ ಪಿಐ ರವರ ನಿರ್ದೇಶದ ಮೇರೆಗೆ ಅವರ ಜೊತೆ ಸುರಪೂರ ಪಟ್ಟಣಕ್ಕೆ ಹೋಗಿ ಘಟನಾ ಸ್ಥಳ ತೋರಿಸಿರುತ್ತೇನೆ. ಅಲ್ಲಿ ಎ.ಇ. ಅವರು ನಕ್ಷೆ ತಯಾರಿಸಿರುತ್ತಾರೆ. ಸದರಿ ನಕ್ಷೆಯನ್ನು ನಿ.ಪಿ.30 ಎಂದು ಗುರುತಿಸಲಾಯಿತು. ಪೊಲೀಸರು

ತಯಾರಿಸಿದ ನಕ್ಷೆಯನ್ನು ನಿ.ಪಿ.31 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.31(ಎ) ಎಂದು ಗುರುತಿಸಲಾಯಿತು. ಈ ಬಗ್ಗೆ ಪೊಲೀಸರಿಗೆ ಹೇಳಿಕೆಗಳನ್ನು ಕೊಟ್ಟಿರುತ್ತೇನೆ.

<u>ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಹೆಚ್.ಎಮ್.ಪಿ. ವಕೀಲರಿಂದ</u>

ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.

<u>ಪ್ರಮಾಣ ವಚನ ಭೋಧಿಸಿದ ದಿನಾಂಕಃ 25-10-2023</u>
<u>ಪಾಟೀ ಸವಾಲು ಆರೋಪಿಯ ಪರವಾಗಿ ಶ್ರೀ. ಹೆಚ್.ಎಮ್.ಪಿ. ವಕೀಲರಿಂದ</u>

೮. ನನ್ನ ಸ್ವಂತ ಊರು ಜೇವರ್ಗಿ ತಾಲೂಕಿನ ಆಂದೋಲಾ ಗ್ರಾಮ. ಯಾದಗಿರಿ ಇಂದ ಆಂದೋಲಾ ೮0 ಕಿ.ಮೀ. ದೂರ ಇದೆ. ನಾನು ಶಹಪೂರದಲ್ಲಿ ಮನೆ ಮಾಡಿಕೊಂಡಿದ್ದೇನೆ. ನಾನು ಶಹಾಪೂರದಿಂದ ಯಾದಗಿರಿಗೆ ಪ್ರತಿ ದಿನ ಓಡಾಡುತ್ತೇನೆ. ನಮ್ಮ ಕಛೇರಿ ಬೆಳಿಗ್ಗೆ 10-00 ಗಂಟೆಗೆ ತೆರೆಯುತ್ತದೆ. ಸಾಮಾನ್ಯವಾಗಿ ಕರ್ತವ್ಯದ ಅವಧಿಯಲ್ಲಿ ಎಲ್ಲಾದರೂ ಕಳುಹಿಸಬೇಕಾದರೆ ಮೇಲಾಧಿಕಾರಿಗಳು ಆದೇಶ ಮಾಡಿ ಆವಕ ಜಾವಕ ರಜೇಸ್ಟರನಲ್ಲಿ ಆ ಬಗ್ಗೆ ನಂಬರ ಕೊಡುತ್ತಾರೆ ಎಂದರೆ ಸರಿ. ನಿ.ಪಿ.2೮ ರಲ್ಲಿ ಯಾವುದೇ ರೀತಿ ಪತ್ರದ ಸಂಖ್ಯೆ ನಮೂದಾಗಿಲ್ಲ ಎಂದರೆ ಸರಿ. ನಮ್ಮ ಮೇಲಾಧಿಕಾರಿಗಳು ನನಗೆ ಲೋಕಾಯುಕ್ತ ಕಛೇರಿಗೆ ಹೋಗುವಂತೆ ಹೇಳಿದ್ದರು ಪತ್ರ ಕೊಟ್ಟಿಲ್ಲ. ನಾವು ಸಹ ಮೇಲಾಧಿಕಾರಿಗಳ ಆದೇಶ ಇದ್ದರೂ ಕರ್ತವ್ಯದ ಅವಧಿಯಲ್ಲಿ ಹೊರಗೆ ಹೋಗಬೇಕಾದರೆ ಮುಮೆಂಟ ರಜೇಸ್ಟರನಲ್ಲಿ ನಮೂದು ಮಾಡಬೇಕು ಎಂದರೆ ಸರಿ. ಆದರೆ ನಾನು ಆ ರೀತಿ ನಮೂದು ಮಾಡಿರುವುದಿಲ್ಲ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ನಾನು ದಿಃ

28.02.201, 01.03.2015 ಮತ್ತು 03.03.2015 ರಂದು ಲೋಕಾಯುಕ್ತ ಕಛೇರಿಗೆ ಹೋಗಿದ್ದು ಆ ಬಗ್ಗೆ ಮುಮೆಂಟ ರಜೀಸ್ಟರನಲ್ಲಿ ನಮೂದು ಮಾಡಿರುವುದಿಲ್ಲ. ನಾನು ಕೇವಲ ಮೇಲಾಧಿಕಾರಿಗೆ ಮೌಖಿಕವಾಗಿ ತಿಳಿಸಿ ಹೋಗಿದ್ದೆ. ದಿಃ 01.03.2015 ರಂದು ಮತ್ತು 03.03.2015 ರಂದು ಲೋಕಾಯುಕ್ತ ಕಛೇರಿಯಿಂದ ಪತ್ರ ಮುಖೇನ ನನಗೆ ಬರುವಂತೆ ಕೋರಿಲ್ಲ. ನಾನು ಬೆಳಿಗ್ಗೆ 11-30 ಗಂಟೆಗೆ ಲೋಕಾಯುಕ್ತ ಕಛೇರಿಗೆ ಹೋದೆ. ನಾನು ಹೋಗುವಷ್ಟರಲ್ಲಿ ಫಿರ್ಯಾದಿ ಠಾಣೆಯಲ್ಲಿ ಇದ್ದರು. ನಾನು ದೂರನ್ನು ಓದಿ ನೋಡಲಿಲ್ಲ. ಆ ಸಮಯದಲ್ಲಿ ಆರೋಪಿಯ ಬಳಿ ಫಿರ್ಯಾದಿಗೆ ಸಂಬಂಧಪಟ್ಟ ಕೆಲಸ ಬಾಕಿ ಇತೋ ಇಲ್ಲವೋ ಎಂಬ ಬಗ್ಗೆ ನಾನು ಯಾವುದೇ ದಾಖಲೆಯನ್ನು ಪರಿಶೀಲಿಸಲಿಲ್ಲ. ಅದೇ ರೀತಿ ಪ್ರವೀಣಕುಮಾರ ಸಹ ಯಾವುದೇ ದಾಖಲೆಯನ್ನು ಪರಿಶೀಲಿಸಲಿಲ್ಲ. ನಾವು ಪಂಚರಾಗುವ ಮೊದಲು ಲೋಕಾಯುಕ್ತ ಕಛೇರಿಯಲ್ಲಿ ಪ್ರಕರಣಕ್ಕೆ ಸಂಬಂಧಪಟ್ಟ ಎಲ್ಲ ದಾಖಲೆಯನ್ನು ಪರಿಶೀಲಿಸಬೇಕು ಎಂದರೆ ಸರಿ.

ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.

ಪಿ.ಡಬ್ಲ್ಯೂ.2.ಪ್ರಮಾಣ ವಚನ ಭೋಧಿಸಿದ ದಿನಾಂಕಃ 28-02-2025
ಪಾಟೀ ಸವಾಲು ಆರೋಪಿಯ ಪರವಾಗಿ ಶ್ರೀ. ಹೆಚ್.ಎಮ್.ಪಿ. ವಕೀಲರಿಂದ

೨. ಪಿಐ ಅವರು ದೂರನ್ನು ನನಗೆ ತೋರಿಸಿದರು. ದಾಖಲಾತಿಗಳನ್ನು ನೋಡಿದೆ. ದಾಖಲಾತಿಗಳ ಪ್ರಕಾರ ಕೆಲಸ ಮುಗಿದಿರಲಿಲ್ಲ. ಈಗ ನನಗೆ ತೋರಿಸಿದ ದಾಖಲೆಯ ಪ್ರಕಾರ 31.01.2015 ಕ್ಕೆ ಕೇಸ ಕೊಡುವ ಪೂರ್ವದಲ್ಲಿಯೇ 11-ಇ ನಕ್ಷೆ ಆಗಿತ್ತು ಎಂದರೆ ಸರಿ. ಈ ದಾಖಲಾತಿಗಳ ಆಧಾರದ ಮೇಲೆ ನಾನು ಕೆಲಸ ಬಾಕಿ ಇದೆ ಎಂದು ಹೇಳಿದೆ ಆದರೆ ಈ ದಾಖಲಾತಿಗಳ ಬಗ್ಗೆ ನನಗೆ ಗೊತ್ತಿರಲಿಲ್ಲ. ಸದರಿ ಜೂಸ್ ಸಂಟೆರ ಸುರಪೂರ ಗಾಂಧಿ ಚೌಕ ಬಳಿ ಇದೆ ಎಂದರೆ ಸರಿ. ಅಲ್ಲಿ ಯಾವಾಗಲೂ ಹೆಚ್ಚು ಗ್ರಾಹಕರು ಇರುತ್ತಾರೆ ಎಂದರೆ ಸರಿ. ಅಲ್ಲಿ ಜಾಸ್ತಿ ಜನ ಕುಳಿತುಕೊಂಡು ಮಾತನಾಡುತ್ತಿರುತ್ತಾರೆ ಎಂದರೆ ಸರಿ ಮತ್ತು ಶಬ್ದ ಜಾಸ್ತಿ ಇರುತ್ತದೆ ಎಂದರೆ ಸರಿ. ಹೆಚ್ಚು ಶಬ್ಧ ಇದ್ದಲ್ಲಿ ಸಾದಾರಣವಾಗಿ ಮಾತನಾಡುವ ಶಬ್ಧ ಬೇರೆಯವರಿಗೆ ಕೇಳಿಸುವುದಿಲ್ಲ ಎಂದರೆ ಸರಿ.

10. ನನಗೆ ಫಿರ್ಯಾದಿ ಮತ್ತು ಆರೋಪಿ ಈ ಪ್ರಕರಣ ದಾಖಲಾಗುವ ಮೊದಲು ಗೊತ್ತಿರಲಿಲ್ಲ. ಆರೋಪಿ ಮತ್ತು ಫಿರ್ಯಾದಿಯ ಧ್ವನಿಯನ್ನು ಮೊದಲು ನಾನು ಯಾವತ್ತು ಕೇಳಿರಲಿಲ್ಲ. ಸ್ವರಕ್ಷಣ ಹೇಳಿಕೆಯನ್ನು ಆರೋಪಿ ಬರೆದುಕೊಟ್ಟಿಲ್ಲ ಮತ್ತು ಅದನ್ನು ಲೋಕಾಯುಕ್ತ ಪೊಲೀಸರು ಸೃಷ್ಟಿಸಿದ್ದಾರೆ ಮತ್ತು ಆರೋಪಿ ಬೇರೆ ರೀತಿ ಹೇಳಿಕೆ ಬರೆದುಕೊಟ್ಟಿದ್ದ ಎಂದರೆ ಸರಿಯಲ್ಲ. ಫಿರ್ಯಾದಿ ಎಲ್ಲರ ಮೇಲೆ ಸುಳ್ಳು ಪ್ರಕರಣವನ್ನು ದಾಖಲಿಸುವ ಹವ್ಯಾಸ ಮಾಡಿಕೊಂಡಿದ್ದು ಯಾವ ಸರಕಾರಿ ನೌಕರರು ಹಣ ಕೊಡುವುದಿಲ್ಲವೋ ಅವರ ವಿರುದ್ಧ ಈ ರೀತಿಯ ಸುಳ್ಳು ಪ್ರಕರಣಗಳನ್ನು ದಾಖಲಿಸುತ್ತಾನೆ ಎಂದು ಬರೆದುಕೊಟ್ಟಿದ್ದ ಎಂದರೆ ಗೊತ್ತಿಲ್ಲ. ದಿಃ 31.01.2015 ಕ್ಕೆ 11-ಇ ನಕ್ಷೆ ತಯಾರಿಸಿದ್ದರೂ ಸಹ ಆರೋಪಿಯಿಂದ ಹಣ ಪಡೆಯುವ ಸಲುವಾಗಿ ಸುಳ್ಳು ಪ್ರಕರಣ ದಾಖಲಿಸಿದ್ದಾನೆ ಎಂದರೆ ಸರಿಯಲ್ಲ.

11. ಆ ಜ್ಯೂಸ್ ಸೆಂಟರನಲ್ಲಿ ಯಾವುದೇ ಕೋಣೆಗಳು ಇರುವುದಿಲ್ಲ ಒಂದು ಹಾಲ್ ಇರುತ್ತದೆ. ಅಲ್ಲಿ ಅಂದಾಜು 7-8 ಟೆಬಲಗಳು ಇದ್ದವು. ಆ ಜ್ಯೂಸ್ ಸೆಂಟರನಲ್ಲಿ ಸುಮಾರು 125 ಜನ ಇದ್ದರು. ಜ್ಯೂಸ್ ಸೆಂಟರನಲ್ಲಿ ಇದ್ದ ಯಾವುದೇ ಗ್ರಾಹಕರನ್ನು ಪೊಲೀಸರು ಸಾಕ್ಷಿ ಕೊಡುವಂತೆ ಕೇಳಲಿಲ್ಲ. ಆ ಹಾಲ್ ಸುಮಾರು 20 x 30 ಅಡಿ ಅಳತೆ ಇತ್ತು. ನಾನು ದಾಳಿಗೆ ಲೋಕಾಯುಕ್ತ ಪೊಲೀಸರ ಜೊತೆ ಹೋಗಿಲ್ಲ ಮತ್ತು ಅವರ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

12. ದಿಃ 28-02-2015 ರಂದು ಲೋಕಾಯಕ್ತ ಪೊಲೀಸರ ಪತ್ರದ ಕೋರಿಕೆಯ ಮೇರೆಗೆ ನಮ್ಮ ಮೇಲಾಧಿಕಾರಿಗಳ ಮೌಖಿಕ ನಿರ್ದೇಶನದ ಮೇರೆಗೆ ಬೆಳಿಗ್ಗೆ 11-30 ಗಂಟೆಗೆ ಲೋಕಾಯುಕ್ತ ಕಛೇರಿಗೆ ಹಾಜರಾಗಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಜೊತೆ ಲೋಕಾಯುಕ್ತ ಕಛೇರಿಗೆ ಪ್ರವಿಣಕುಮಾರ ತಂದೆ ಅಶೋಕ ಸಿಂದೆ ಸಹ ಹಾಜರಾದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಲೋಕಾಯುಕ್ತ ಕಛೇರಿಯಲ್ಲಿ ಇನ್ಸಪೇಕ್ಟರ ಬಿ.ವಿ. ಪಟೇಲ ಅವರು ನಮ್ಮಗಳನ್ನು ಪರಸ್ಪರ ಪರಿಚಯಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದೂರುದಾರ ರಂಗಪ್ಪ ಅವರನ್ನು ಪರಿಚಯಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅವರ ದೂರಿನ ಮೇರೆಗೆ ನಿಮ್ಮನ್ನು ಪಂಚರಾಗಿ ಕರೆಸಿಕೊಂಡಿದ್ದೇವೆ ಎಂದು ತಿಳಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದಕ್ಕೆ ನಾವು ಒಪ್ಪಿದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಫಿರ್ಯಾದಿದಾರರಿಗೆ ಮಾತನಾಡಿಸಿ ಅವರ ಮೊಬೈಲನಲ್ಲಿ ದಾಖಲಾಗಿದ್ದ ಧ್ವನಿಯನ್ನು ಕೇಳಿಸಿಕೊಂಡೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಾಳಪ್ಪ ಆರೋಪಿ ಅವರು 5000/- ರೂಪಾಯಿ ಲಂಚವನ್ನು ಲಕ್ಷ್ಮಿಬಾಯಿ ಅವರ ಹೊಲ ಮಾರುವ ವಿಷಯದಲ್ಲಿ ನಕ್ಷೆ

ತಯಾರಿಸಿಕೊಡಲು ಕೇಳಿದ್ದು ಅದರಲ್ಲಿ 2000/- ರೂಪಾಯಿಗಳನ್ನು ಕೊಟ್ಟಿದ್ದು ಉಳಿದ 3000/- ರೂಪಾಯಿಗಳನ್ನು ಕೊಡುವದಾಗಿ ಹೇಳಿದ್ದಾಗಿ ತಿಳಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಸಂಭಾಷಣೆಯನ್ನು ಕೇಳಿಸಿ ಲೋಕಾಯುಕ್ತ ಸಿಬ್ಬಂದಿಯವರ ಕೈಯಿಂದ ಬರೆಯಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಸಂಭಾಷಣೆಯನ್ನು ಕಂಪ್ಯೂಟರದಿಂದ ಸಿ.ಡಿ.ಗೆ ವರ್ಗಾಯಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದನ್ನು ಕಾಕಿ ಕವರನಲ್ಲಿ ಹಾಕಿ ಜೆ.ಬಿ. ಎಂಬ ಅಕ್ಷರದಿಂದ ಸೀಲ್ ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಪಿಐ ಅವರು ಫಿರ್ಯಾದಿಗೆ ನೀವು ತಂದಿರುವ ಹಣವನ್ನು ಕೊಡಿ ಎಂದು ಕೇಳಿದ್ದು ಅದರಂತೆ ಫಿರ್ಯಾದಿ 500/- ರೂಪಾಯಿ ಮುಖ ಬೆಲೆಯ 6 ನೋಟುಗಳನ್ನು ಒಟ್ಟು 3,000/- ರೂಪಾಯಿ ಮತ್ತೊಬ್ಬ ಪಂಚ ಪ್ರವಿಣ ಕುಮಾರ ಕೈಯಲ್ಲಿ ಕೊಟ್ಟು ಪರಿಶೀಲನೆ ಮಾಡುವಂತೆ ಹೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ನೋಟುಗಳು ಸರಿಯಾಗಿವೆ ಎಂದು ಹೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ನೋಟುಗಳ ನಂಬರ ಮತ್ತು ಮೌಲ್ಯವನ್ನು ಪ್ರವಿಣಕುಮಾರ ಹೇಳಿದಂತೆ ನಾನು ಬರೆದುಕೊಂಡೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

13. ಎರಡು ರಾಸಾಯನಿಕ ಪುಡಿ ತೋರಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಒಂದು ಪಿನಾಪ್ತಲಿನ ಪುಡಿ ಮತ್ತು ಇನ್ನೊಂದು ಸೋಡಿಯಂ ಕಾರ್ಬೋನೇಟ ಎಂದು ತಿಳಿಸಿದರು ಮತ್ತು ಅವುಗಳ ಗುಣಧರ್ಮದ ಬಗ್ಗೆ ತಿಳಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಪೇದೆ ವಿಜಯಕುಮಾರ ಅವರಿಗೆ ಸದರಿ ನೋಟುಗಳಿಗೆ ಪಿನಾಪ್ತಲಿನ ಪೌಡರನ್ನು ಎರಡೂ ಕಡೆ ಹಚ್ಚುವಂತೆ ಹೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅವರು ನೋಟುಗಳಿಗೆ ಪಿನಾಪ್ತಲಿನ ಪೌಡರ ಹಚ್ಚಿ ಪಂಚ ಪ್ರವೀಣಕುಮಾರ ಅವರ ಕೈಯಲ್ಲಿ ಕೊಟ್ಟರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಪ್ರಮೀಣ ಕುಮಾರ ಆ ನೋಟುಗಳನ್ನು ಎರಡೂ ಕೈಗಳಿಂದ ಎಣಿಸಿ ಫಿರ್ಯಾದಿ ಶರ್ಟನ ಎಡಜೇಬಿನಲ್ಲಿ ಏನೂ ಇಲ್ಲ ಎಂದು ಖಾತರಿಪಡಿಸಿಕೊಂಡು ಸದರಿ ಹಣವನ್ನು ಜೇಬಿನಲ್ಲಿ ಇಟ್ಟಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಎರಡು ಗಾಜಿನ ಬಟ್ಟಲುಗಳನ್ನು ತರಿಸಿ ಸೋಡಿಯಂ ಕಾರ್ಬೋನೇಟ ದ್ರಾವಣ ತಯಾರಿಸಿದ್ದು ಅದು ಬಣ್ಣ ರಹಿತವಾಗಿತ್ತು ನಂತರ ಪಂಚ ಪ್ರವಿಣಕುಮಾರನ ಕೈ ಬೆರಳುಗಳನ್ನು ಆದ್ರಾವಣದಲ್ಲಿ ಅದ್ದಿಸಿದರು ಸದರಿ ಕೈ ಬೆರಳುಗಳು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಬಣ್ಣ ಬಂದಿದ್ದ ದ್ರಾವಣವನ್ನು ಬಾಟಲಿಯಲ್ಲಿ ಹಾಕಿ ಜೆ.ಬಿ. ಎಂಬ ಅಕ್ಷರದಿಂದ ಸೀಲ್ ಮಾಡಿದರು ನಂತರ ಪಂಚರು ಮತ್ತು ಪಿ.ಐ. ಸಹಿ ಮಾಡಿದ ಚೀಟಿ ಅಂಟಿಸಿರುತ್ತಾರೆ ಅದನ್ನು ಆರ್ಟಿಕಲ್-2 ಎಂದು ಗುರುತಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ

ಸರಿಯಲ್ಲ. ನಂತರ ರಾಸಾಯನಿಕ ಪ್ರಕ್ರಿಯೇ ಬಗ್ಗೆ ನಮಗೆ ತಿಳಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಆರ್ಟಿಕಲ್-1, 2 ಮತ್ತು ಪಿನಾಪ್ತಲಿನ ಪುಡಿ ಇರುವ ಡಬ್ಬಿಯನ್ನು ಲೋಕಾಯುಕ್ತ ಕಛೇರಿಯ ಅಲಮಾರದಲ್ಲಿ ಇಟ್ಟು ಬೀಗ ಹಾಕಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಿಐ ಅವರು ಆರೋಪಿ ಲಂಚದ ಹಣ ಕೇಳಿದಾಗ ಅದನ್ನು ಕೊಡುವಂತೆ ಫಿರ್ಯಾದಿಗೆ ಹೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಸದರಿ ಲಂಚದ ಹಣ ಇಂತಹ ಜಾಗದಲ್ಲಿ ಇಡು ಅಥವಾ ಇಂತಹವರಿಗೆ ಕೊಡು ಎಂದು ಹೇಳಿದರೆ ಆ ರೀತಿ ಮಾಡುವಂತೆ ಹೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಫಿರ್ಯಾದಿಗೆ ಟ್ರ್ಯಾಪ ಆದ ನಂತರ ಕೈಯಿಂದ ಮುಖವನ್ನು ವರಸಿಕೊಳ್ಳುವಂತೆ ಸನ್ನೆ ಮಾಡುವಂತೆ ತಿಳಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಆರೋಪಿ ಮತ್ತು ಫಿರ್ಯಾದಿಯ ನಡುವೆ ನಡೆದ ಸಂಭಾಷಣೆಯನ್ನು ಧ್ವನಿ ಮುದ್ರಣಮಾಡಿಕೊಂಡು ಬರುವಂತೆ ಪಿಐ ರವರು ಹೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ನನಗೆ ಫಿರ್ಯಾದಿ ಮತ್ತು ಆರೋಪಿಯ ನಡುವೆ ನಡೆಯುವ ಸಂಭಾಷಣೆಯನ್ನು ತಿಳಿದುಕೊಳ್ಳುವಂತೆ ಹೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಲ್ಲಿ ವಿಡಿಯೋ ಮಾಡಿ ಫೋಟೋಗಳನ್ನು ಸೈಯದ ಸಫಿಯೋದ್ದಿನ ಪೇದೆಯಿಂದ ತೆಗೆಯಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಪಂಚನಾಮೆ ದಿಃ 28.02.2015 ರಂದು ಬೆಳಿಗ್ಗೆ 11-45 ರಿಂದ 12-45 ಗಂಟೆಯವರೆಗೆ ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

14. ದಿಃ 28.02.2015 ರಂದು ಮಧ್ಯಾಹ್ಞ 1-00 ಗಂಟೆಗೆ ಲೋಕಾಯುಕ್ತ ಕಛೇರಿಯಿಂದ ಒಂದು ಟವೇರಾ ಖಾಸಗಿ ವಾಹನ ಮತ್ತೊಂದು ಇಲಾಖಾ ವಾಹನದಲ್ಲಿ ಹೊರಟೇವು ನಾನು, ಫಿರ್ಯಾದಿ, ತನಿಖಾಧಿಕಾರಿ, ವಿಜಯಕುಮಾರ, ಶ್ರೀನಿವಾಸ, ಖಾಸಗಿ ವಾಹನದಲ್ಲಿ ಇದ್ದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಇಲಾಖಾ ವಾಹನದಲ್ಲಿ ಪಂಚ ಸಾಕ್ಷಿ ಪ್ರವಿಣಕುಮಾರ, ಸಫಿಯುದ್ದಿನ ಪೇದೆ, ಮುತ್ತಣ್ಣ ಪೇದೆ ಇದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಧ್ಯಾಹ್ಞ 2-00 ಹಸನಾಪೂರ ಗ್ರಾಮಕ್ಕೆ ಹೋದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಲ್ಲಿ ವಾಹನ ನಿಲ್ಲಿಸಿ ಪಿಐ ರವರು ಫಿರ್ಯದಿಗೆ ಆರೋಪಿಗೆ ಫೋನ್ ಮಾಡುವಂತೆ ಸೂಚಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಿಐ ರವರ ಸೂಚನೆಯ ಮೇರೆಗೆ ಫಿರ್ಯಾದಿ ಆರೋಪಿಗೆ ಫೋನ್ ಮಾಡಲಾಗಿ ಆರೋಪಿ ಸಿದ್ದಾಪೂರನಲ್ಲಿ ಇದ್ದು ಅರ್ಧ ಗಂಟೆಯಲ್ಲಿ ಸುರಪೂರಕ್ಕೆ ಬರುತ್ತೇನೆ ಎಂದು ತಿಳಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಪಿಐ ರವರು ಸೂಚನೆಯಂತೆ ಸುರಪೂರಕ್ಕೆ ಹೊರಟೇವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸುರಪೂರದ ವೆಂಕಟಸ್ವಾಮಿ ಗುಡಿಯ ಹತ್ತಿರ ಹೋಗಿ ಕಾಯ್ದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಧ್ಯಾಹ್ಞ

3-30 ಗಂಟೆಗೆ ಆರೋಪಿಯಿಂದ ಫಿರ್ಯಾಧಿಗೆ ಫೋನ್ ಬಂತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಫೋನ್ ನಲ್ಲಿ ಸಂಜು ಜೂಸ್ ಸೆಂಟರನಲ್ಲಿ ಇದ್ದೇನೆ ಅಲ್ಲಿಗೆ ಬಾ ಎಂದು ಹೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ಫಿರ್ಯಾದಿ ಸಂಜು ಜೂಸ್ ಸೆಂಟರನಲ್ಲಿ ಹೋದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಮತ್ತು ಫಿರ್ಯಾದಿ ಒಂದು ಟೇಬಲನಲ್ಲಿ ಕುಳಿತರು ಮತ್ತೊಂದು ಟೇಬಲನಲ್ಲಿ ನಾನು ಕುಳಿತುಕೊಂಡೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಫಿರ್ಯಾದಿ ಆರೋಪಿ ನೌಕರನಿಗೆ ತನ್ನ ಕೆಲಸದ ಬಗ್ಗೆ ವಿಚಾರಿಸಿದಾಗ ಆರೋಪಿ ಲಂಚದ ಹಣ ಕೇಳಿದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಫಿರ್ಯಾದಿ 3,000/- ರೂಪಾಯಿಗಳನ್ನು ಸರ್ವೆಯರ್ ಮಾಳಪ್ಪ ಅವರ ಕೈಯಲ್ಲಿ ಕೊಟ್ಟರು ಅವರು ಎರಡೂ ಕೈಗಳಿಂದ ಆ ನೋಟುಗಳನ್ನು ಎಣಿಸಿಕೊಂಡು ತನ್ನ ಶರ್ಟನ ಎಡ ಜೇಬಿನಲ್ಲಿ ಇಟ್ಟುಕೊಂಡರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಫಿರ್ಯಾದಿ ಎದುಬಂದು ಹೊರಗಡೆ ಇದ್ದ ಲೋಕಾಯುಕ್ತ ಸಿಬ್ಬಂದಿಗೆ ತನ್ನ ಕರವಸ್ತ್ರದಿಂದ ಮುಖ ವರಸಿಕೊಳ್ಳುವಂತೆ ಸನ್ನೆ ಮಾಡಿದನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಗ ಪಿಐ ಮತ್ತು ಇತರೆ ಸಿಬ್ಬಂದಿಗಳು ಮತ್ತು ಪಂಚ ಪ್ರವಿಣಕುಮಾರ ಎಲ್ಲರು ಬಂದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೇದೆ ವಿಜಯಕುಮಾರ ಮತ್ತು ಶ್ರೀನೀವಾಸ ಇವರು ಆರೋಪಿಯ ಎರಡು ಕೈಗಳನ್ನು ಹಿಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಫಿರ್ಯಾದಿ ಆರೋಪಿ ಮಾಳಪ್ಪನನ್ನು ತೋರಿಸಿ ಲಂಚದ ಹಣ 3,000/- ರೂಪಾಯಿ ಕೊಟ್ಟಿದ್ದೇನೆ ಎಂದು ಹೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಿಐ ರವರು ಆರೋಪಿಗೆ ಪರಿಚಯ ಮಾಡಿಕೊಂಡರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ ಲಂಚದ ಹಣದ ವಿಷಯದಲ್ಲಿ ಟ್ರ್ಯಾಪ ಮಾಡಿರುತ್ತೇವೆ ಎಂದು ತಿಳಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಫಿರ್ಯಾದಿ ಮತ್ತು ನನಗೆ ಘಟನೆಯ ಬಗ್ಗೆ ಕೇಳಿದಾಗ ಸಂಜು ಜೂಸ್ ಸೆಂಟರಗೆ ಬಂದು ಕೆಲಸದ ಬಗ್ಗೆ ವಿಚಾರಿಸಿದಾಗ ಹಣವನ್ನು ಕೇಳಿದ್ದು ಎಲ್ಲಾದರೂ ಅಷ್ಟೆ ಕೊಡುವದು ಇಲೇ ಕೊಡು ಎಂದಾಗ 3,000/- ರೂಪಾಯಿ ಹಣವನ್ನು ಆರೋಪಿಗೆ ಫಿರ್ಯಾದಿಗೆ ಕೊಟ್ಟರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಪೊಲೀಸರಿಗೆ ಸನ್ನೆ ಮಾಡಿದರು ಎಂದು ತಿಳಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಪಿಐ ರವರು ಸಿಬ್ಬಂದಿಗೆ ಸೋಡಿಯಂ ಕಾರ್ಬೋನೇಟ ಬಣ್ಣ ರಹಿತವಾದ ದ್ರಾವಣ ತಯಾರಿಸಲು ತಿಳಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಿಬ್ಬಂದಿ ದ್ರಾವಣ ತಯಾರಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದ್ರಾವಣದಲ್ಲಿ ಮಾಳಪ್ಪ ಅವರ ಬಲಗೈ ಬೆರಳುಗಳನ್ನು ತೊಳೆದಾಗ ಸದರಿ ದ್ರಾವಣ ಗುಲಾಬಿ ಬಣ್ಣಕ್ಕೆ ತಿರುಗಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಾಳಪ್ಪ ಅವರ ಎಡಗೈ ಬೆರಳುಗಳನ್ನು ತೊಳೆದಾಗ ಸದರಿ ದ್ರಾವಣ ಗುಲಾಬಿ ಬಣ್ಣಕ್ಕೆ ತಿರುಗಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ಜೇಬಿನಲ್ಲಿ

ಇದ್ದ ನೋಟುಗಳನ್ನು ನನಗೆ ತೆಗೆಯುವಂತೆ ಸೂಚಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆ ನೋಟುಗಳನ್ನು ತೆಗೆದು ಪಂಚ ಸಾಕ್ಷಿ ಪ್ರವಿಣಕುಮಾರ ಅವರ ಕೈಯಲ್ಲಿ ಕೊಟ್ಟಿದ್ದು ಅವರು ಸದರಿ ನೋಟುಗಳು ಲೋಕಾಯುಕ್ತ ಕಛೇರಿಯಲ್ಲಿ ಪ್ರಾಯೋಗಿಕ ಪಂಚನಾಮೆ ಕಾಲದಲ್ಲಿ ಬರೆದುಕೊಂಡ ನೋಟುಗಳು ಅವೆ ಇರುತ್ತವೆ ಎಂದು ತಿಳಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಹಣವನ್ನು ಹೊಂದಾಣಿಕೆ ಮಾಡಿ ನೋಡಿದಾಗ ಆ ನಂಬರಗಳು ಅವೇ ಇದ್ದವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಂಜು ಜೂಸ್ ಸೆಂಟರನಲ್ಲಿ ಬಹಳ ಗದ್ದಲ ಇದುದ್ದರಿಂದ ಅಲ್ಲಿಂದ ಸರ್ವೆ ಕಛೇರಿಗೆ ಹೋದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಲ್ಲಿ ಮಾಳಪ್ಪ ಎಂಬುವವರನ್ನು ವಿಚಾರಿಸಿದಾಗ ಸಿದ್ದರಾಜು ಅವರು ಸಾಹೇಬರು ಯಾದಗಿರಿಯ ಕಛೇರಿಗೆ ಹೋಗಿದ್ದಾರೆ ಎಂದು ಹೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನರೇಶಕುಮಾರ ಅವರಿಗೆ ಆರೋಪಿಯ ದಸ್ತಗಿರಿ ನೊಟೀಸನ್ನು ಪಿಐ ರವರು ಜಾರಿ ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಲ್ಲಿಂದ ಲೋಕಾಯುಕ್ತ ಕಛೇರಿಗೆ ವಾಪಾಸ ಬಂದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

15. ನಂತರ ಪಿಐ ರವರು ಆರೋಪಿತನು ಧರಿಸಿದ ಶರ್ಟನ ಬದಲಿ ವ್ಯವಸ್ಥೆ ಮಾಡಿ ಆರೋಪಿ ಧರಿಸಿದ ಶರ್ಟನ ಎಡ ಜೇಬಿನ ಒಳಪದರನ್ನು ಶ್ರೀನಿವಾಸ ಹೆಚ್.ಸಿ. ಅವರಿಂದ ಸೋಡಿಯಂ ಕಾರ್ಬೋನೇಟ ದ್ರಾವಣದಲ್ಲಿ ತೋಳೆದಾಗ ಸದರಿ ಭಾಗ ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿತು ಸದರಿ ದ್ರಾವಣವನ್ನು ಎರಡು ಸಮಬಾಗ ಮಾಡಿ ಗಾಜಿನ ಬಾಟಲಿಯಲ್ಲಿ ಪ್ರತ್ಯೇಕವಾಗಿ ಸಂಗ್ರಹಿಸಿ ಬಾಟಲಿ ಬಾಯಿ ಮುಚ್ಚಿ ಬಟ್ಟೆಯಿಂದ ಸುತ್ತಿ ದಾರದಿಂದ ಕಟ್ಟಿ ಜೆ.ಬಿ. ಎಂಬ ಮೋಹರನ್ನು ಹಾಕಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಧರಿಸಿದ ಶರ್ಟನ್ನು ಪಡೆದು ಅದನ್ನು ಸೀಲ್ ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಫಿರ್ಯಾದಿಯ ಬಳಿ ಇದ್ದ ಧ್ವನಿ ಸುರುಳಿಯನ್ನು ಲ್ಯಾಪಟಾಪಗೆ ಹಾಕಿಸಿ ಪಂಚರ ಸಮಕ್ಷಮ ಕೇಳಿಸಲಾಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಸಂಭಾಷಣೆಯನ್ನು ಸಿ.ಡಿ.ಗೆ ವರ್ಗಾಯಿಸಿ ಆ ಸಿ.ಡಿ.ಯನ್ನು ಸೀಲ್ ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಫಿರ್ಯಾದಿದಾರನ್ನು ಟ್ರ್ಯಾಪ ಕಾಲಕ್ಕೆ ಮುಂಚೆ ಮತ್ತು ಟ್ರ್ಯಾಪ ಕಾಲಕ್ಕೆ ಸಂಗ್ರಹಿಸಿದ ಆರೋಪಿಯ ಧ್ವನಿ ಯನ್ನು ಕೇಳಿಸಿ ಆತನ ಮೇಲಾಧಿಕಾರಿಯಾದ ನರೇಶ ಕುಮಾರ ಶಿರೇಸ್ತೆದಾರ ತಹಶೀಲ್ದಾರ ಕಛೇರಿ ಸುರಪೂರ ಅವರಿಂದ ಆರೋಪಿಯ ಧ್ವನಿಯನ್ನು ಗುರುತಿಸಲಾಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ದಸ್ತಗಿರಿ ಬಗ್ಗೆ ನರೇಶ ಕುಮಾರ ಅವರಿಗೆ ನೋಟಸನ್ನು ಕೊಟ್ಟರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಆರೋಪಿ ಸ್ವರಕ್ಷಣ ಹೇಳಿಕೆಯನ್ನು ಕೈಯಲ್ಲಿ ಬರೆದುಕೊಟ್ಟ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಯಾರೋ ನನ್ನ ವಿರುದ್ಧ ದ್ವೇಶದಿಂದ ದಿಃ 24.02.2014 ರಂದು 2000/- ರೂಪಾಯಿ ತೆಗೆದುಕೊಂಡಿದ್ದು ನಿಜವಿರುತ್ತದೆ ಎಂದು ಬರೆದಿರುತ್ತಾನೆ ಎಂದು

ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ **28.02.2015** ರಂದು ಹಣ ಕೊಡಲಾಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಫಿರ್ಯಾದಿ ಮತ್ತು ನನ್ನನ್ನು ಪಿಐ ವಿಚಾರ ಮಾಡಿದಾಗ ಸದರಿ ಹಣ ಲಂಚದ ಹಣ ಆಗಿತ್ತು ಎಂದು ಫಿರ್ಯಾದಿ ಮತ್ತು ನಾನು ಹೇಳಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಜೆ.ಬಿ. ಸೀಲನ್ನು ಪಂಚ ಸಾಕ್ಷಿ ಪ್ರವಿಣಕುಮಾರ ಅವರ ತಾಬಾಕ್ಕೆ ಕೊಟ್ಟು ಸದರಿ ಸೀಲು ನ್ಯಾಯಾಧೀಶರು ಅಥವಾ ವಿಚಾರಣ ಅಧಿಕಾರಿ ಕೇಳಿದಾಗ ಮಾತ್ರ ಹಾಜರಪಡಿಸುವಂತೆ ಹೇಳಿ ಆ ಬಗ್ಗೆ ರಸೀದಿ ಪಡೆದುಕೊಂಡರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಎಲ್ಲ ಪ್ರಕ್ರಿಯೇಯನ್ನು ಸೈಯದ ಸಫಿಯುದ್ದಿನ ಅವರಿಂದ ಫೋಟೊ ತೆಗೆಸಿ ವೀಡಿಯೋ ಮಾಡಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಪಂಚನಾಮೆಯನ್ನು ಮಧ್ಯಾಹ್ನ **3-30** ರಿಂದ ಸಂಜೆ **7-30** ರ ವರೆಗೆ ಪಂಚರ ಸಮಕ್ಷಮ ಫಿರ್ಯಾದಿ ಹೇಳಿದಂತೆ ತಯಾರಿಸಲಾಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ **01.03.2015** ರಂದು ಮರು ಹೇಳಿಕೆಯನ್ನು ಪಡೆದುಕೊಂಡರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ **03.03.2015** ರಂದು ನಾನು, ಫಿರ್ಯಾದಿ ಮತ್ತು ಇನ್ನೊಬ್ಬ ಪಂಚರ ಲೋಕಾಯುಕ್ತ ಠಾಣೆಗೆ ಹಾಜರಾದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಲ್ಲಿ ಇದ್ದ ಲೋಕೋಪಯೋಗಿ ಇಲಾಖೆಯ ಎ.ಇ. ಮೋಹನ ದೇಶಮುಖ ಇವರನ್ನು ಪರಿಚಯ ಮಾಡಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಪಿಐ ರವರ ನಿರ್ದೇಶದ ಮೇರೆಗೆ ಅವರ ಜೊತೆ ಸುರಪೂರ ಪಟ್ಟಣಕ್ಕೆ ಹೋಗಿ ಘಟನಾ ಸ್ಥಳ ತೋರಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಲ್ಲಿ ಎ.ಇ. ಅವರು ನಕ್ಷೆ ತಯಾರಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಬಗ್ಗೆ ಪೊಲೀಸರಿಗೆ ಹೇಳಿಕೆಗಳನ್ನು ಕೊಟ್ಟಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ-ಇಲ್ಲ</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.

Form No.4 (Civil)
Deposition
Sheets
(R.P.No.57)

# ವಿಶೇಷ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಸ್ಪೆಷಲ್.ಸಿ. ಸಂಖ್ಯೆ: 41/2016

ಫ್ರಾ.ಸಾ. 3 ಚಾ.ಸಾ. 3

| | | |
|---|---|---|
| ಹೆಸರು | : | ಪ್ರವಿಣಕುಮಾರ |
| ತಂದೆಯ ಹೆಸರು | : | ಅಶೋಕ ಸಿಂದೆ |
| ವಯಸ್ಸು | : | 33 ವರ್ಷ |
| ಉದ್ಯೋಗ | : | ಅಧೀಕ್ಷಕರು ಸಹಾಯಕ ಕೃಷಿ ನಿರ್ದೇಶಕರ ಕಛೇರಿ ದೇವದುರ್ಗಾ |
| ವಾಸ | : | ದೇವದುರ್ಗಾ |

**ಪ್ರಮಾಣ ವಚನ ಭೋಧಿಸಿದ ದಿನಾಂಕ: 28-03-2025**
**ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ**

ನಾನು ಮೇ 2012 ರಿಂದ ಅಗಸ್ಟ 2017 ರ ವರೆಗೆ ಜಂಟಿ ಕೃಷಿ ನಿರ್ದೇಶಕರು ಯಾದಗಿರಿಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿ: 28.02.2015 ರಂದು ಲೋಕಾಯುಕ್ತ ಠಾಣೆಯಿಂದ ನಮ್ಮ ಮೇಲಾಧಿಕಾರಿಯವರಿಗೆ ಒಂದು ಪತ್ರ ಬಂದಿದ್ದು ನಮ್ಮ ಮೇಲಾಧಿಕಾರಿಗಳ ಸೂಚನೆಯ ಮೇರೆಗೆ ಬೆಳಿಗ್ಗೆ 11-30 ಗಂಟೆಗೆ ಲೋಕಾಯುಕ್ತ ಕಛೇರಿಗೆ ಹೋಗಿರುತ್ತೇನೆ. ಸದರಿ ದಾಖಲೆ ನಿ.ಪಿ.28 ಆಗಿರುತ್ತದೆ. ಅಲ್ಲಿ ಬಿ.ಬಿ. ಪಟೇಲ ಪಿಐ ಅವರು ನನ್ನನ್ನು ಪರಿಚಯ ಮಾಡಿಕೊಂಡರು. ಅವರ ಮುಂದೆ ಕುಳಿತ್ತಿದ್ದ ರಂಗಪ್ಪ ಎನ್ನುವವರನ್ನು ಪರಿಚಯ ಮಾಡಿಕೊಟ್ಟರು. ರಂಗಪ್ಪ ಎನ್ನುವವರು ಲಕ್ಷ್ಮಿ ಬಾಯಿ ಅವರ ಸರ್ವೆ ನಂ. 184 ರ 2 ಎಕರೆ 13 ಗುಂಟೆ ಜಮೀನನ್ನು ಕೊಂಡುಕೊಡಿದ್ದು ಆ ಬಗ್ಗೆ 11-ಇ ಸ್ಕೆಚ್ ತಯಾರಿಸಿ ಕೊಡುವ ಸಂಬಂಧ ಸರ್ವೆ ಇಲಾಖೆಗೆ ಅರ್ಜಿಕೊಟ್ಟಿದ್ದು ಮಾಳಪ್ಪ ಅವರಿಗೆ ಆ ಕೆಲಸ ಸರ್ವೆ ಇಲಾಖೆಯಿಂದ ನೇಮಕವಾಗಿದ್ದು ಅವರು ಸರ್ವೆ ಮಾಡಿಕೊಡಲು 5,000/- ರೂ ಲಂಚ ಕೇಳಿದ್ದಾಗಿ ಹೇಳಿದರು ಆ ಪೈಕಿ ಮೊದಲು 2,000/- ರೂ ಕೊಟ್ಟಿದ್ದು ಉಳಿದ 3,000/- ರೂ ಕೊಡುವದು ಬಾಕಿ ಇದ್ದು ಆ ಬಗ್ಗೆ ಲಂಚ ಇಷ್ಟ ಇಲ್ಲದೇ ದೂರು ಕೊಟ್ಟಿದ್ದಾಗಿ ಹೇಳಿದರು. ಆತ ಕೊಟ್ಟ ದೂರನ್ನು ನಮಗೆ ಕೊಟ್ಟು ಓದಲು

ಹೇಳಿದರು ಅದರಲ್ಲಿ ಅದೇ ವಿಷಯ ಇತ್ತು. ನಮ್ಮ ಕಛೇರಿಯಿಂದ ಮತ್ತೊಬ್ಬ ಪಂಚ ಬಸವರಾಜ ಅವರು ಸಹ ಬಂದಿದ್ದು ನಾವಿಬ್ಬರೂ ಒಪ್ಪಿಕೊಂಡೆವು. ರಂಗಪ್ಪ ಅವರ ಬಳಿ ಇದ್ದ ಮೊಬೈಲನಲ್ಲಿ ಸಂಭಾಷಣೆ ಇದ್ದು ಅದನ್ನು ಕೇಳಿಸಿದರು. ಆ ಮಾಹಿತಿಯನ್ನು ಅಲ್ಲಿಯೇ ಇದ್ದ ಪೊಲೀಸರಿಗೆ ಬರೆದುಕೊಳ್ಳಲು ಹೇಳಿದ್ದು ಅವರು ಬರೆದುಕೊಂಡರು. ಆ ದಾಖಲೆಯಲ್ಲಿ ನಾನು ಸಹಿ ಮಾಡಿದ್ದು ಸಾಕ್ಷಿಯ ಸಹಿಯನ್ನು ನಿ.ಪಿ.19(ಬಿ) ಎಂದು ಗುರುತಿಸಲಾಯಿತು. ಸದರಿ ಧ್ವನಿ ಮುದ್ರಿಕೆಯನ್ನು ಕಂಪ್ಯೂಟರಗೆ ಹಾಕಿ ಸಿ.ಡಿ. ಮಾಡಿ ಅದನ್ನು ಸೀಲ್ ಮಾಡಿ ಆರ್ಟಿಕಲ್-1 ಎಂದು ನಂಬರ ಕೊಟ್ಟಿದ್ದು ಅದನ್ನು ಮು.ಮಾ.5 ಎಂದು ಗುರುತಿಸಲಾಗಿದೆ. ಫಿರ್ಯಾದಿಯನ್ನು ಲಂಚದ ಹಣ ತೆಗೆದುಕೊಡುವಂತೆ ಕೇಳಿದರು. ಆಗ ಫಿರ್ಯಾದಿ 500/- ಮುಖ ಬೆಲೆಯ 6 ನೋಟುಗಳನ್ನು ಇನ್ಸಪೇಕ್ಟರ ಅವರು ನನ್ನ ಕೈಗೆ ಕೊಡುವಂತೆ ಹೇಳಿದರು. ನಾನು ಆ ನೋಟುಗಳನ್ನು  ಪರೀಕ್ಷೆ ಮಾಡಿ ಅದರಲ್ಲಿದ್ದ ನಂಬರಗಳನ್ನು ಬಸವರಾಜ ಅವರಿಗೆ ಹೇಳಿದ್ದು ಅವರು ಬರೆದುಕೊಂಡರು ಆ ಬಗ್ಗೆ ದಾಖಲೆಯನ್ನು ನೋಡುತ್ತಿದ್ದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.29(ಬಿ) ಎಂದು ಗುರುತಿಸಲಾಯಿತು. ಅಲ್ಲಿ ಕಛೇರಿಯಲ್ಲಿದ್ದ 2 ಪ್ಲಾಸ್ಟಿಕ ಡಬ್ಬಿಗಳನ್ನು ತೋರಿಸಿದಲ್ದು ಒಂದರಲ್ಲಿ ಪಿನಾಪ್ತಲಿನ ಪೌಡರ ಮತ್ತು ಇನ್ನೊಂದರಲ್ಲಿ ಸೋಡಿಯಂ ಕಾರ್ಬೋನೇಟ ಇರುವುವದಾಗಿ ಹೇಳಿ ಅವುಗಳ ಗುಣದರ್ಮ ವಿವರಿಸಿದರು. ಅಲ್ಲಿದ್ದ ಪೇದೆಯನ್ನು ಕರೆದು ನೋಟುಗಳ ಮೇಲೆ ಫಿನಾಪ್ತಲಿನ ಪೌಡರ ಹಚ್ಚಲು ಹೇಳಿದರು. ನಂತರ ಆ ನೋಟುಗಳನ್ನು ನನ್ನ ಕೈಗೆ ಕೊಡುವಂತೆ ಪಿಐ ಅವರು ಹೇಳಿದರು. ರಂಗಪ್ಪ ಅವರ ಜೇಬಿನಲ್ಲಿ ಯಾವುದೇ ದಾಖಲೆ ಹಣ ಇಲ್ಲ ಎಂದು ಖಚಿತ ಪಡಿಸಿಕೂಂಡು ಆ ನೋಟುಗಳನ್ನು ಎಣಿಸಿ ಆ ಜೇಬಿನಲ್ಲಿ ಇಟ್ಟಿದ್ದೇನೆ. ಅಲ್ಲಿ ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ ನನ್ನ ಕೈ ಬೆರಳುಗಳನ್ನು ಅದ್ದಿಸಿದಾಗ ಆ ಸೋಡಿಯಂ ಕಾರ್ಬೋನೇಟ ದ್ರಾವಣ ಗುಲಾಬಿ ಬಣ್ಣಕ್ಕೆ ತಿರುಗಿತು. ಅವುಗಳನ್ನು ಬಾಟಲಿಗೆ ಹಾಕಿ ಸೀಲ್ ಮಾಡಿದ್ದು ಅದು ಆರ್ಟಿಕಲ್-2 ಆಗಿದ್ದು ಅದನ್ನು ಮು.ಮಾ.2 ಎಂದು ಗುರುತಿಸಲಾಗಿದೆ. ಮಾಳಪ್ಪ ಹಣ ಪಡೆದಾಗ ಇದೆ ರೀತಿ ಆಗುತ್ತದೆ ಎಂದು ಹೇಳಿದರು. ಆರೋಪಿ ಹಣವನ್ನು ಕೇಳಿದಾಗ ಆತನ ಕೈಗೆ ಕೊಡಿ ಅಥವಾ ಅವರು ಹೇಳಿದ ಜಾಗದಲ್ಲಿ ಇಡಿ ಎಂದು ಫಿರ್ಯಾದಿಗೆ ತಿಳಿಸಿ ಹೇಳಿದರು. ನೆರಳು ಸಾಕ್ಷಿ ಬಸವರಾಜ ಇವರಿಗೆ ಫಿರ್ಯಾದಿ ಜೊತೆಗೆ ಹೋಗುವಂತೆ ಹೇಳಿದರು. ವೈಸ ರೇಕಾರ್ಡರನ್ನು ಯಾವ ರೀತಿ ಉಪಯೋಗಿಸಬೇಕು ಎಂದು ಹೇಳಿ ಫಿರ್ಯಾದಿ ಕೊಟ್ಟಿರುತ್ತಾರೆ. ಬಸವರಾಜ ಅವರಿಗೆ ಆ ಘಟನೆಯನ್ನು ವಿಕ್ಷಿಸಿ ಕೇಳಿದಾಗ ಹೇಳುವಂತೆ ಹೇಳಿದರು. ಈ ಪ್ರಕ್ರಿಯೇ ನಡೆದ ನಂತರ ಫಿರ್ಯಾದಿ ಹೊರಗೆ ಬಂದು ನಮಗೆ ಮಾಹಿತಿ ಕೊಡಬೇಕು ಎಂದು ತಿಳಿಸಿದರು. ಈ ಬಗ್ಗೆ ವಿಡಿಯೋ ಮತ್ತು ಫೋಟೊಗಳನ್ನು ತೆಗೆದಿರುತ್ತಾರೆ. ಸದರಿ ಫೋಟೊಗಳು ನಿ.ಪಿ.3 ರಿಂದ 17 ಆಗಿರುತ್ತವೆ. ಈ ಘಟನೆ ಬೆಳಿಗ್ಗೆ 11-45 ರಿಂದ 12-45 ರ ವರೆಗೆ ಆಯಿತು. ಸದರಿ ಪಂಚನಾಮೆಗೆ ನಾನು ಸಹಿ ಮಾಡಿರುತ್ತೇನೆ ಸಾಕ್ಷಿಯ ಸಹಿಯನ್ನು ನಿ.ಪಿ.18(ಸಿ) ಎಂದು ಗುರುತಿಸಲಾಯಿತು.

3. ಅದೇ ದಿನ ಮಧ್ಯಾಹ್ನ 1-00 ಗಂಟೆಗೆ ನಾವೆಲ್ಲರೂ ಸೇರಿ ಎರಡು ವಾಹನಗಳಲ್ಲಿ ಹೊದೆವು. ನಾನು 3 ಜನ ಪೇದೆಗಳು ಸರಕಾರಿ ವಾಹನದಲ್ಲಿ ಮತ್ತು ಪಿಐ, ನೆರಳು, ಸಾಕ್ಷಿ, ಪೇದೆ ಇವರುಗಳು ಖಾಸಗಿ ವಾಹನದಲ್ಲಿ ಹಸನಾಪೂರ ಕ್ರಾಸಗೆ ಹೋದೆವು. ಅಲ್ಲಿ ತನಿಖಾಧಿಕಾರಿಯವರು ಫಿರ್ಯಾದಿಗೆ ಆರೋಪಿಗೆ ಫೋನ್ ಮಾಡಿ ತಿಳಿದುಕೊಳ್ಳುವಂತೆ ಹೇಳಿದರು. ಆಗ ಆರೋಪಿ ಸಿದ್ದಾಪೂರದಲ್ಲಿದ್ದೇನೆ ಅರ್ಧಾ ಗಂಟೆ ಬಿಟ್ಟು ಸುರಪೂರಕ್ಕೆ ಬರುತ್ತೇನೆ ಎಂದು ಹೇಳಿದರು. ಮತ್ತೊಮ್ಮೆ ಏನು ಮಾಡಬೇಕು ಎಂದು ತನಿಖಾಧಿಕಾರಿ ಫಿರ್ಯಾದಿ ಹಾಗೂ ನೆರಳು ಸಾಕ್ಷಿಗೆ ಸಲಹೆ ಸೂಚನೆಗಳನ್ನು ಕೊಟ್ಟರು. ನಾನು, ಮತ್ತು ಪೇದೆ ಸುರಪೂರ ಪಟ್ಟಣದ ವೇಣುಗೋಪಾಲ ಸ್ವಾಮಿ ಗುಡಿಯ ಹತ್ತಿರ ಮಧ್ಯಾಹ್ನ 2-30 ಗಂಟೆಗೆ ಹೋಗಿ ನಿಂತೆವು. ಮಧ್ಯಾಹ್ನ 3-30 ಗಂಟೆಗೆ ಫಿರ್ಯಾದಿಗೆ ಆರೋಪಿಯಿಂದ ಫೋನ್ ಬಂತು. ಸುರಪೂರದ ಗಾಂಧಿ ಚೌಕ ಬಳಿ ಇರುವ ಸಂಜು ಜ್ಯೂಸ ಸೆಂಟರ ಬಳಿ ಬರುವಂತೆ ಆರೋಪಿ ತಿಳಿಸಿದಂತೆ ನಾವುಗಳು ಹೋಗಿ ಯಾರಿಗೂ ಅನುಮಾನ ಬರಂತೆ ಅಲಲ್ಲಿ ನಿಂತುಕೊಂಡೆವು. ಮಧ್ಯಾಹ್ನ 3-40 ಗಂಟೆಗೆ ರಂಗಪ್ಪ ಅವರು ಸಂಜು ಜ್ಯೂಸ ಸೆಂಟರನಿಂದ ಹೊರಗೆ ಬಂದು ಮುಖ ಒರೆಸಿಕೊಳ್ಳುವ ಸೂಚನೆ ನೀಡಿದರು. ತಕ್ಷಣ ನಾವು ಮತ್ತು ಪಿಐ ಮತ್ತು ಇತರ ಸಿಬ್ಬಂದಿಗಳು ಜ್ಯೂಸ ಸೆಂಟರ ಒಳಗೆ ಹೋದೆವು. ಆಗ ಫಿರ್ಯಾದಿ ರಂಗಪ್ಪ ಆರೋಪಿಯನ್ನು ತೋರಿಸಿ ಈತನೇ ಮಾಳಪ್ಪ ಎಂದು ಹೇಳಿದ. ಇವರೆ ನನ್ನ ಬಳಿ 3,000/-ರೂ ಲಂಚ ತೆಗೆದುಕೊಂಡಿದ್ದು ಎಂದು ಹೇಳಿದ. ಇಬ್ಬರು ಆರೋಪಿಗಳು ಆತನ ಕೈಗಳನ್ನು ಹಿಡಿದುಕೊಂಡರು. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಪಿಐ ಅವರು ನಾವು ಲೋಕಾಯುಕ್ತ ಇನ್ಸಪೇಕ್ಟರ ಎಂದು ಪರಿಚಯ ಮಾಡಿಸಿಕೊಂಡರು. ಲಂಚ ಪಡೆದುಕೊಂಡಿದ್ದರಿಂದ ನಿಮ್ಮನ್ನು ಟ್ರ್ಯಾಪ ಮಾಡಿದ್ದೇವೆ ಎಂದು ಆರೋಪಿಗೆ ತಿಳಿಸಿದರು.

ಸಾಕ್ಷಿಯ ಕೋರಿಕೆಯ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆಗಾಗಿ ಮುಂದೂಡಲಾಯಿತು.

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.

(ಫ್ರಾಸಾ-3) ಪ್ರಮಾಣ ವಚನ ಭೋಧಿಸಿದ ದಿನಾಂಕಃ 29-08-2025
ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ

4. ನಂತರ ಪೋಲೀಸರು ಫಿರ್ಯಾದಿದಾರರು ಮತ್ತು ಚಾಸಾ-2 ಬಸವರಾಜ ರವರಿಗೆ ನಡೆದ ಘಟನೆ ಬಗ್ಗೆ ವಿಚಾರಿಸಿದ್ದು, ಅದರಂತೆ ಇಬ್ಬರು ಏಕರೀತಿಯಾಗಿ ನಡೆದ ಸಂಗತಿ ಬಗ್ಗೆ ತಿಳಿಸಿದರು. ಅವರು ಹೇಳಿದಂತೆ ಆರೋಪಿ ಸಿದ್ದಾಪೂರದಲ್ಲಿದ್ದೇನೆ ಅರ್ದ ಗಂಟೆಯಲ್ಲಿ ಬರುತ್ತೇನೆ ಎಂದು ಹೇಳಿ ಸುರಪೂರದ ಗಾಂಧಿ ಚೌಕ ಬಳಿ ಇರುವ ಸಂಜು ಜೂಸ ಸೆಂಟರ್ ಬಳಿ ಬರುವಂತೆ ತಿಳಿಸಿದ್ದು, ಅದರಂತೆ ಅರ್ಧ ಗಂಟೆ ನಂದತರ ಸಂಜು ಜೂಸ್ ಸೆಂಟರನಲ್ಲಿ ಬಂದು ಫಿರ್ಯಾದಿದಾರರು ಮತ್ತು ಆರೋಪಿ ಒಂದು ಟೇಬಟಲನಲ್ಲಿ ಕುಳಿತಿದ್ದು, ಆರೋಪಿತರ ಹಿಂಭಾಗದ ಟೇಬಲನಲ್ಲಿ ನೆರಳು ಸಾಕ್ಷಿ ಬಸವರಾಜ ಕುಳಿತಿದ್ದು, ಫಿರ್ಯಾದಿದಾರರು ಅವರ ಕೆಲಸದ ಬಗ್ಗೆ ಆರೋಪಿಯನ್ನು ವಿಚಾರಿಸಿದ್ದು, ಆಗ ಆರೋಪಿತರು ರೂಮಿನಲ್ಲಿ ಆದರೇನು ಇಲ್ಲೆ ಆದರೇನು ಇಲ್ಲೆ ಕೂಡಿ ಎಂದು ಹೇಳಿದ್ದು, ಅದರಂತೆ ಫಿರ್ಯಾದಿದಾರರು ಆರೋಪಿಗೆ ರೂ. 3000/- ಕೊಟ್ಟರು. ಆರೋಪಿ ಅದನ್ನು ಎಡಗೈಯಿಂದ ತೆಗೆದುಕೊಂಡು ಎಣಿಸಿ ಶರ್ಟನ ಎಡಜೇಬಿನಲ್ಲಿ ಇಟ್ಟುಕೊಂಡಿದ್ದು, ನಂತರ ಫಿರ್ಯಾದಿದಾರರು ನಾವು ಹೇಳಿದಂತೆ ಹೊರ ಬಂದು ಸನ್ನೆ ಮಾಡಿದರು ಎಂದು ತಿಳಿಸಿದರು. ಅದರಂತೆ ನೆರಳು ಸಾಕ್ಷಿ ಸಹ ಅದೇ ರೀತಿ ಘಟನೆ ನಡೆಯಿತು ಎಂದು ನುಡಿದರು.

5. ನಂತರ ಲೋಕಾಯುಕ್ತ ಪೋಲೀಸರು ನೀರು, ಸೋಡಿಯಂಕಾರ್ಬೋನೆಟ, ಮತ್ತು ಪಿನಾಪ್ತಲಿನ ಪೌಡರನ್ನು ತರಿಸಿದ್ದು, ನೀರು ಮತ್ತು ಸೋಡಿಯಂಕಾರ್ಬೋನೆಟ ಗಾಜಿನ ಬಟ್ಟಲನಲ್ಲಿ ಮಿಶ್ರಣ ಮಾಡಿ ಎರಡು ಭಾಗ ಮಾಡಿ ಎರಡು ಪ್ರತ್ಯೇಕ ಗಾಜಿನ ಬಾಟಲಗಳಲ್ಲಿ ಹಾಕಿ 3 ಮತ್ತು 3(ಎ) ಸಂಖ್ಯೆ ನೀಡಿ ಜೆ.ಬಿ ಅಂತಾ ಸೀಲು ಮಾಡಿ ಪ್ಯಾಕ್ ಮಾಡಿದರು. ಇನ್ನು ಉಳಿದ ಸೋಡಿಯಂಕಾರ್ಬೋನೆಟ ಧ್ರಾವಣವನ್ನು ಆರೋಪಿತರ ಎರಡು ಕೈ ತೊಳೆಸಿದರು.

(ಸಾಕ್ಷಿಯು ಮುಂದುವರೆದ ಮುಖ್ಯ ವಿಚಾರಣೆಗೆ ಕಾಲವಕಾಶ ಕೋರಿದ್ದು, ಅನುಮತಿಸಿ ಮುಂದೂಡಲಾಯಿತು)

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.